


### ಉಪಯುಕ್ತ ಮಾಹಿತಿ

ನಿಸರ್ಗದ ಸಂಪನ್ಮೂಲಗಳನ್ನು ಉಚಿತವಾಗಿ ಬಳಸುವ ಬಗ್ಗೆ 'ನಿಸರ್ಗದೆಡೆಗೆ ಆರೋಗ್ಯ ನಡಿಗೆ' ಸುಧಾ ಹೆಗಡೆಯವರ ಮುಖಪುಟ ಲೇಖನ ಉಪಯುಕ್ತ ಮಾಹಿತಿ ನೀಡಿದೆ.

-ಎಸ್.ಶ್ರುತಕೀರ್ತಿ, ಡಾ.ಡಿ.ಎಸ್.ಸುಮುಖ, ಬೆಂಗಳೂರು/ ಫೈಜ್ನಟ್ರಾಜ್, ಸಂತೆಬೆನ್ನೂರು/ ಬಿ.ಎಸ್.ನಾರಾಯಣ ಸ್ವಾಮಿ, ಬೋಧನ ಹೊಸಹಳ್ಳಿ/ ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

### ಓದಿನ ಜತೆಗೆ ಪ್ರವಾಸ

ಕೊನಾರ್ಕ್ ಮತ್ತು ಪ್ರಕೃತಿಯ ಕುಂಭ ಮೇಳ ಈ ಎರಡು ಲೇಖನಗಳನ್ನು ಓದಿದಾಗ ಅಲ್ಲೆಲ್ಲಾ ಪ್ರವಾಸ ಮಾಡುತ್ತಲಿದ್ದೇವೆಯೋ ಎಂಬ ಅನುಭವ ಉಂಟಾಯಿತು. ದೇಗುಲದ ಹಾಗೂ ಜಲಪಾತದ ಚಿತ್ರಗಳಂತೂ ಮನಸೂರೆಗೊಂಡವು.

-ಎ.ಕೆ. ಪಟ್ಟಾಭಿ, ಬೆಂಗಳೂರು/ ಎಸ್. ನಿತ್ಯರತ್ನಗಿರಿ, ಮೂಡಬಿದರೆ

### ಅಕಾಲಿಕ ಉತ್ತರ

'ನೀವು ಕೇಳಿದಿರಿ?' ಅಂಕಣದಲ್ಲಿ ಒಗಟೊಗಟಾಗಿ ಮಾತನಾಡುವವರಿಗೆ ಏನೆನ್ನಬೇಕು? ಎಂಬ ಪ್ರಶ್ನೆಗೆ, ರಾಮ್ ಅವರು– ಹಿರೇಮಗಳೂರು ಕಣ್ಣನ್ ಎಂದು ಉತ್ತರಿಸಿದ್ದಾರೆ. ಕಣ್ಣನ್ ಅವರ ಪತ್ನಿ ಹೇಮಲತಾ ಕಣ್ಣನ್ ಇತ್ತೀಚೆಗೆ ಅಕಾಲಿಕವಾಗಿ ನಿಧನರಾದರು. ಆಗ ಮನೆಗೆ ಬಂದವರಿಗೆಲ್ಲ ದಣಿವರಿಯದೇ ಸತ್ಕಾರ ಮಾಡುತ್ತಿದ್ದರು ಕಣ್ಣನ್. ಈ ಹಿನ್ನೆಲೆಯಲ್ಲಿ ಮೇಲಿನ ಉತ್ತರ ವಿಸ್ಮಯಕರ! ಅಕಾಲಿಕ!

-ನಾರಾಯಣ ಯಾಜಿ, ಶಿರಾಲಿ

### ಬಲಾತ್ಕಾರದ ಓದು!

ನಾನೀಗ ಧಾರಾವಾಹಿ ಓದುವುದೇ ಕಡಿಮೆ. ಆದರೆ ಡಾ. ಗಿರಿಜಮ್ಮನವರ 'ಚಂದಮಾಮ' ಬಲಾತ್ಕಾರವಾಗಿ ಓದಿಸುತ್ತಿದೆ!

-ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

### ರಾಜಕೀಯ ಬೇಡ

ಸಮುದಾಯದಲ್ಲಿ ರಾಜಕೀಯ ನುಸುಳಿದ್ದನ್ನು ಗುಡಿಹಳ್ಳಿ ನಾಗರಾಜ ಸೂಕ್ಷ್ಮವಾಗಿ ಪರಿಚಯಿಸಿದ್ದಾರೆ. ವೈಚಾರಿಕ ಲೋಕಕ್ಕೆ ಸಮುದಾಯ ಕೊಡುಗೆ ಸಣ್ಣದಲ್ಲ.

-ಕೊಹಿಮ, ಬಸರಕೋಡು/ ಹುರುಕಡ್ಲಿ ಶಿವಕುಮಾರ್, ಬಾಚಿಗೊಂಡನಹಳ್ಳಿ

### ಸೂಕ್ತ ಪರಿಹಾರ

ಗರ್ಭಕೋಶ ಜಾರುವಿಕೆ ಕುರಿತು ಡಾ.ಟಿ.ಎಂ.ಶಿವಾನಂದಯ್ಯ ಸೂಚಿಸಿರುವ ಪರಿಹಾರ ಸೂಕ್ತವಾಗಿದೆ.

-ಬಿ.ಎಸ್.ಮುಳ್ಳೂರ, ಹಲಗತ್ತಿ

### ಅಚ್ಚರಿ ಏನಿದೆ?

ಶಶಿರೇಖಾ ನಾಗೇಂದ್ರ ಅವರು, 'ನಿಮ್ಮ ಪುಟ'ದಲ್ಲಿ 'ತೆಂಗಿನಕಾಯಿಯಲ್ಲಿ ಬೆಣ್ಣೆ'ಯನ್ನು ಅಚ್ಚರಿಯ ಸುದ್ದಿ ಎಂಬಂತೆ ಬರೆದಿದ್ದಾರೆ. ಆದರೆ ತೆಂಗಿನಕಾಯಿ ಮೊಳಕೆ ಬರುವಾಗ ಒಳಗೆ ಬಿಳಿಯ ಉಂಡೆ ನಿರ್ಮಾಣವಾಗುತ್ತದೆ. ಅದಕ್ಕೆ 'ಗೂಬು' ಎಂದು ಕರೆಯುತ್ತಾರೆ.

-ಇಂದು, ತಿಪಟೂರು/ ಶೀಲಾ ಸತ್ಯೇಂದ್ರ ಸ್ವಾಮಿ, ಹರವೆ

### ಉತ್ತಮ ಕಥೆ

ಮನುಷ್ಯನ ಕಪಟ, ವಂಚನೆಯನ್ನು 'ಚಪ್ಪಲಿಯ ಸ್ವಗತ' ಮಾತುಗಳ ಮೂಲಕ ಎ.ಚಿದಾನಂದ ಗೌಡರ ಕಥೆ ಸೊಗಸಾಗಿ ಕಟ್ಟಿಕೊಟ್ಟಿದೆ.

-ಕಾಳಮ್ಮ, ಬಸರಕೋಡು/ ಎಚ್.ಎನ್.ವಿಶ್ವನಾಥ, ಶಿವಮೊಗ್ಗ

### ಇಂದಿನ ಸ್ಥಿತಿಗೆ ಕನ್ನಡಿ

ಬಸವರಾಜ ಪಂಚಗಲ್ ಬರೆದ ಕಥೆ 'ನ್ಯಾಯದೇವತೆ' ಇವತ್ತಿನ ಆಗುಹೋಗುಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

-ಪಿ.ಎನ್. ಶ್ರೀವತ್ಸ, ಬೆಂಗಳೂರು

### ಸಕಾಲಿಕ ಲೇಖನ

ಕೇಶವ ಕುಡ್ಲರ 'ದನಗಳ ಜಾತ್ರೆ' ಲೇಖನ ಸಕಾಲಿಕ.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಪ್ರತಿ ಪುಟವೂ ಚಂದ

ಜ. 26ರ 'ಸುಧಾ' ಸಂಚಿಕೆಯ ಪ್ರತಿಯೊಂದು ಲೇಖನ, ಚಿತ್ರಗಳು ಹಾಗೂ ವಿನ್ಯಾಸ ಅತ್ಯುತ್ತಮ. ಒಂದು ಪುಟವನ್ನೂ ಬಿಡದಂತೆ ಇಡಿಯಾಗಿ ಓದಿಸಿಕೊಂಡು ಹೋಯಿತು.

-ಶ್ರೀನಾಥ್, ದುಬೈ

## ನಕ್ಕು ಬಿಡಿ

ಒಂದು ಕಾಲಕ್ಕೆ ಮನೆ ಮುಂದಿದ್ದ ಬೋರ್ಡ್‌ನಲ್ಲಿದ್ದ ಒಕ್ಕಣೆ; 'ಅತಿಥಿ ದೇವೋಭವ.'

ನಂತರಕ್ಕೆ, ಅದು 'ಸುಸ್ವಾಗತ' ಎಂದು ಬದಲಾಯಿತು.

ಈಗ 'ನಾಯಿ ಇದೆ ಎಚ್ಚರಿಕೆ!' ಎಂದಾಗಿದೆ.

ಮುಂದೆ?

'ಹುಚ್ಚುನಾಯಿಗಳಿವೆ ಎಚ್ಚರಿಕೆ!' ಎಂದಾದೀತು.

★★★




ದೇವಸ್ಥಾನಕ್ಕೆ ಬಂದ ದಂಪತಿಗಳನ್ನು ಅರ್ಚಕರು ಕೇಳುತ್ತಾರೆ!

'ಅರ್ಚನೆ ಯಾರ ಹೆಸರಿಗೆ ಮಾಡಲಿ?'

ಆಗ ಗಂಡ ಹೇಳ್ತಾನೆ: 'ಅವಳ ಹೆಸರಿಗೇ ಮಾಡಿ. ನಂಗೆ ಮನೇಲೇ ಆಗಿದೆ.'

★★★

ಹೆಂಡತಿ: ನಾನ್ ಸಾಯ್ತೀನಿ.

ಗಂಡ: ನೀನು ಸತ್ರೆ ನಾನೂ ಸಾಯ್ತೀನಿ ಕಣೇ.

ಹೆಂಡತಿ: ಏಕೆ!

ಗಂಡ: ಅಷ್ಟೊಂದು ಖುಷಿ ತಡಕೊಳ್ಳೋ ಶಕ್ತಿ ನನಗಿಲ್ಲ ಚಿನ್ನಾ.




ಟೀಚರ್: ಪ್ರಪಂಚದಲ್ಲಿ ಅತಿ ಪುರಾತನ ಪ್ರಾಣಿ ಯಾವುದು?

ಬಂಟ: ಜೀಬ್ರಾ ಸರ್.

ಟೀಚರ್: ಅದ್ಹೇಗೋ?

ಬಂಟ: ಅದು ಬ್ಲ್ಯಾಕ್ ಅಂಡ್ ವೈಟ್‌ನಲ್ಲಿದೆಯಲ್ಲಾ ಸರ್; ಅದಕ್ಕೆ.

-ಎಸ್. ವಿಶ್ವನಾಥ, ಮಂಡ್ಯ